ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ತಮ್ಮ ಉತ್ತರದಲ್ಲಿ ನೂರು ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಬೇಕು. ಸುಮ್ಮನೆ ಆ 20 ಕೋಟಿ ರೂಪಾಯಿಗಳನ್ನು ಒದಗಿಸಿದರೆ ಏನು ಕೆಲಸ ಆಗುತ್ತೆ ? ಹಿಂದೆ ಏನು ಹಣ ಇತ್ತು, ಅದರಿಂದ ಏನೂ ಆಗಿರಲಿಲ್ಲ. ನೀವು ಕನಿಷ್ಟ ಮೂರು ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ನಿಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅದು ಆಗುವುದಿಲ್ಲ. ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಸುಮ್ಮನೆ ಏನಾದರೂ ಹೇಳಿದರೆ ಅದು ಉತ್ತರವಾಗುವುದಿಲ್ಲ. 100 ಕೋಟಿ ಇಡುತ್ತೇವೆ ಎಂದು ಅನೌನ್ಸ್ ಮಾಡಿ.

ಅಧ್ಯಕ್ಷರು: ಅವರು ಹೇಳಿದ್ದಾರೆ. ಇಟ್ಟಿದ್ದೇವೆ ಎಂದು.

ಆ) ಭದ್ರಾ ಡ್ಯಾಮ್‌ನಿಂದ ತುಂಗಭದ್ರಾ ಡ್ಯಾಮಿಗೆ ನೀರಾವರಿ ಹಾಗೂ ಕುಡಿಯುವ ನೀರಿನ ಸಲುವಾಗಿ 5 ಟಿ.ಎಂ.ಸಿ. ನೀರು ಬಿಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್(ಗದಗ): ಮಾನ್ಯ ಅಧ್ಯಕ್ಷರೆ, ತುಂಗಾಭದ್ರಾ ನದಿಯ ಕೆಳಗಡೆ ಇರುವ ಜನರಿಗೆ ನೀರಾವರಿ ಸಲುವಾಗಿ ತಾವು ಭದ್ರಾ ರಿಸರ್ವಾರ್‌ನಿಂದ ನೀರನ್ನು ಬಿಡುತ್ತಿದ್ದೀರಿ. ಸಂತೋಷ. ಬಿಡುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಆದರೆ ಅದು ಎರಡೂವರೆಯಿಂದ ಮೂರು ಸಾವಿರ ಕ್ಯೂಸೆಕ್ಸ್‌ಗಿಂತ ಜಾಸ್ತಿಯಾದರೆ ನಾವೆಲ್ಲಾ ದಾರಿ ಉದ್ದಕ್ಕೂ ಕುಡಿಯುವ ನೀರಿನ ಸಲುವಾಗಿ ಏನು ಸ್ಕಾಂಡ್ ಬ್ಯಾರೇಜಸ್‌ಗಳನ್ನು ಮಾಡಿದ್ದೇವೆ, ಅವೆಲ್ಲಾ ಕೊಚ್ಚಿಕೊಂಡು ಹೋಗುತ್ತವೆ. ಕುಡಿಯುವ ನೀರಿಗೆ ಬಹಳ ತಾಪತ್ರಯವಾಗುತ್ತದೆ. ಅದಕ್ಕೆ ದಯವಿಟ್ಟು ಮೂರು ಸಾವಿರ ಕ್ಯೂಸೆಕ್ಸ್‌ಗಿಂತ ಜಾಸ್ತಿ ನೀರು ಬಿಡಲಾರದ ಹಾಗೆ ತಾವು ರೆಗ್ಯುಲೇಟ್ ಮಾಡಿ ಅವರಿಗೆ ಬೇಕಾಗುವಂಥ ಐದು ಟಿಎಂಸಿ ನೀರನ್ನು ಬಿಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಮಾನ್ವಿ): ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಅಚ್ಚುಕಟ್ಟಿನಲಿ ರೈತರಿಗೆ ಅಗಿರತಕ್ಕ ತೊಂದರೆಯಿಂದ ಸನ್ಮಾನ್ಯ ಸಚಿವರು ಆ ಭಾಗಕ್ಕೆ ಬಂದ ಸಂದರ್ಭದಲ್ಲಿ ಎಲ್ಲಾ ಪಕ್ಷದ ಮುಖಂಡರು ಹಾಗೂ ಯುವಜನ ಸಂಘ ಸಂಸ್ಥೆಗಳ ಒಂದು ಕೋರಿಕೆಯ ಮೇರೆಗೆ ಇವತ್ತು ಸರ್ಕಾರ 5 ಟಿಎಂಸಿ ನೀರನ್ನು ಭದ್ರಾದಿಂದ ತುಂಗಾಭದ್ರಾಗೆ ಬಿಟ್ಟು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿರತಕ್ಕ 4 ಲಕ್ಷ ಎಕರೆಯಲ್ಲಿ ನಿಂತಿರುವ ಬೆಳೆಗೆ ನೀರನ್ನು ಕೊಡಬೇಕೆಂದು ಹೇಳಿ ಅಲ್ಲಿ ನೀರನ್ನು ಬಿಡುತ್ತಿದ್ದಾರೆ. ಅಲ್ಲಿ 5 ಟಿಎಂಸಿ ನೀರನ್ನು ಕೊಡಬೇಕೆಂದು ಹೇಳಿ ಈಗಾಗಲೇ ಆದೇಶ ಹೊರಡಿಸಿದ್ದಾರೆ. ಆದುದರಿಂದ ಕನಿಷ್ಟ 5 ಸಾವಿರ ಕ್ಯೂಸೆಕ್ಸ್ ಡಿಸ್‌ಚಾರ್ಜ್ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಹಿಂದೆ ನಮಗೆ ಆಗಿರುವ ಅನುಭವ, ಏಳು ಬಾರಿಗೆ ನಾವು ನೀರನ್ನು ಬಿಡಿಸಿದ್ದೇವೆ. ಆ ನೀರು ಇಲ್ಲಿ ಸೇರಲಿಕ್ಕೆ ಅವಕಾಶ ಇರುವುದಿಲ್ಲ. ಸಾಕಷ್ಟು ನೀರು ನಿಮಗೆ ಪೋಲು ಆಗುತ್ತದೆ. ಏಕೆಂದರೆ ಭದ್ರಾದಿಂದ ತುಂಗಾಭದ್ರಾಗೆ ಬರುವುದರೊಳಗೆ ಸಾವಿರಾರು ಪಂಪ್‌ಸೆಟ್ಟುಗಳು ಇವೆ ಹಾಗಾಗಿ ಐದು ಸಾವಿರ ಕ್ಯೂಸೆಕ್ಸ್ ಮಿನಿಮಮ್ ಅಲ್ಲಿ ಬಿಟ್ಟಿರೆ ನಮಗೆ ಮೂರೂವರೆ ಟಿಎಂಸಿ ಮಾತ್ರ ರಿಕವರಿಯಾಗಲಿಕ್ಕೆ ಸಾಧ್ಯತೆ ಇದೆ. ಆದಾದನಂತರ ಪ್ರವಾಹವನ್ನು ಕಡಿಮೆ ಮಾಡಿ ಕೊನೆಗೆ ಅಲ್ಲಿ ನೀವು ಕುಡಿಯುವ ನೀರಿಗೆ ಏನು ಸ್ಕಾಂಡ್ ಬ್ಯಾಗ್ಸ್ ಹಾಕತಕ್ಕದ್ದು, ಇತ್ಯಾದಿ ಮಾಡಲಿಕ್ಕೆ ಸಾಕಷ್ಟು ಅವಕಾಶ ಇದೆ. ಹಾಗಾಗಿ ಯಾವುದೇ ಕಾರಣಕ್ಕೂ ಎರಡು ಸಾವಿರ, ಎರಡೂವರೆ ಸಾವಿರ ಬಿಟ್ಟರೆ ಅಲ್ಲೇನು ಯಾವ ಉದ್ದೇಶಕ್ಕಾಗಿ ಅವರು ನೀರನ್ನು ಬಿಟ್ಟಿದ್ದರೋ ಅದು ನೆರವೇರುವುದಿಲ್ಲ ಹಾಗೂ

400 ಕೋಟಿ ರೂಪಾಯಿ ಬೆಳೆ ಇವತ್ತು ರಾಯಚೂರು, ಕೊಪ್ಪಳ, ಬಳ್ಳಾರಿಯಲ್ಲಿ ನಿಂತ ಬೆಳೆಗೆ ಹಾನಿಯಾಗುತ್ತಿದೆ, ಅದರಿಂದ ನಮಗೆ ಉಪಯೋಗವಾಗುವುದಿಲ್ಲ. ಕನಿಷ್ಟ ಐದು ಸಾವಿರ ಕ್ಯೂಸೆಕ್ಸ್ ನೀರು ಬೇಕು ಎಂದು ಹೇಳಿ ಅಲ್ಲಿ ಟೆಕ್ನಿಕಲ್ ಅಭಿಪ್ರಾಯವೂ ಇದೆ. ನಾನಾ ಕೂಡಾ ಅಧ್ಯಕ್ಷನಾಗಿ ಎರಡು ಎರಡು ಬಾರಿ ಗೆದ್ದಿದ್ದೇನೆ. ಭದ್ರಾದಿಂದ ಎಂಟು ಟಿಎಂಸಿ 83ನೇ ಇಸವಿಯಲ್ಲಿ ನೀರನ್ನು ಬಿಡಿಸಿರತಕ್ಕ ಅಂಶ, ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು, ಐದು ಸಾವಿರ ಕ್ಯೂಸೆಕ್ಸ್ ನೀರು ಮಿನಿಮಮ್ ಬಿಟ್ಟಾಗ ಮಾತ್ರ ಅದು ತುಂಗಾಭದ್ರಾ ರಿಸರ್‌ವಾಯರ್ ಸೇರಲಿಕ್ಕೆ ಸಾಧ್ಯ ಇದೆ. ದಯವಿಟ್ಟು ನಮಗೆ ಐದು ಟಿಎಂಸಿ ನೀರನ್ನು ಪೂರೈಸಿ ನಂತರ ಪ್ರವಾಹವನ್ನು ಕಡಿಮೆ ಮಾಡಿ. ಆ ನಂತರ ತಾವು ಸ್ಯಾಂಡ್ ಬ್ಯಾಗ್ಸ್‌ಗಳನ್ನು ಹಾಕಬಹುದು.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಈ ತರಹವಾದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಒಂದು ಸಮಸ್ಯೆಯನ್ನು ಡಿ.ಆರ್. ಪಾಟೀಲರು ಎತ್ತಿದ್ದಾರೆ, ತಾವು ಹೇಳಿರುವ ಪ್ರಕಾರ ಸಮಸ್ಯೆಯಿಂದ ವಿಶೇಷವಾಗಿ ಕೊಪ್ಪಳ, ರಾಯಚೂರು, ಬಳ್ಳಾರಿ ಈ ಮೂರು ಜಿಲ್ಲೆಗಳ ರೈತರಿಗೆ ಸುಮಾರು 290 ಕೋಟಿ ರೂಪಾಯಿ ಬೆಲೆಯ ಬೆಳೆಗೆ ತೊಂದರೆಯಾಗುತ್ತದೆ. ಈಗ ಗದಗ್‌ಗೆ ಈ ಸ್ಯಾಂಡೆ ಬ್ಯಾರೇಜಿಗೆ ಸುಮಾರು 30 ಲಕ್ಷ ರೂ.ನಷ್ಟು ಆಗುತ್ತದೆ. ಹಾವೇರಿ ಭಾಗಕ್ಕೆ ಸುಮಾರು 12 ಲಕ್ಷ ರೂ.ನಷ್ಟು ಆಗುತ್ತದೆ. ರಾಣೆಬೆನ್ನೂರಿನಲ್ಲಿ ಸುಮಾರು 12 ಲಕ್ಷದಷ್ಟು ಆಗುತ್ತದೆ. ಸಣ್ಣಪುಟ್ಟ ಸುಮಾರು 50–60 ಲಕ್ಷ ರೂಪಾಯಿ ನಷ್ಟವಾಗಬಹುದು; ಇಲ್ಲ ಎಂದು ಇಲ್ಲ. ಆದರೆ ಹೀಗೇನಾದರೂ ನಾವು ನೀರನ್ನು ಕಡಿಮೆ ಮಾಡಿದರೆ ಈ ಮೂರು ಜಿಲ್ಲೆಯ ಎಲ್ಲಾ ರೈತರು ಕೂಡ ತುಂಬಾ ತೊಂದರೆಯನ್ನು ಅನುಭವಿಸುವ ಸ್ಥಿತಿ ಬರುತ್ತದೆ. ಅದಕ್ಕೋಸ್ಕರ ಈಗಾಗಲೇ ನಾನು ಸಂಬಂಧಪಟ್ಟ ಎಲ್ಲಾ ರೈತರು ರಾಜಕಾರಣಿಗಳು, ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ನೀರನ್ನು ಬಿಟ್ಟಾಗಿದೆ. ಆ ಮೂರು ಜಿಲ್ಲೆಯ ರೈತರುಗಳು ಇವತ್ತಿನ ದಿವಸ ತುಂಬಾ ಸಂತೋಷದಲ್ಲಿದ್ದಾರೆ. ಆದರೆ ತಾವು ಹೇಳಿದ ಅಂಶವೂ ಸತ್ಯ. ಇದಾದ ನಂತರ ಈ ಮೂರು ನಗರಗಳಿಗೆ ಮತ್ತು ಸುತ್ತಮುತ್ತ ಸಣ್ಣಸಣ್ಣ ಊರುಗಳಿಗೆ ಸಮಸ್ಯೆಯಾಗುತ್ತೆ. ಇದನ್ನು ಪರಿಹಾರ ಮಾಡುವುದು ಹೇಗೆ ಎನ್ನುವುದನ್ನೂ ಕೂಡ ಈಗಾಗಲೇ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯೊಂದಿಗೆ ಕೂಡ ಈಗಾಗಲೇ ನಾನು ಮಾತನಾಡಿದ್ದೇನೆ. ನೀರು ಬಿಟ್ಟು ಮುಗಿಯುತ್ತಿದ್ದಂತೆ ಏನು ಬ್ಯಾರೇಜ್‌ಗಳು ಅಕಸ್ಮಾತ್ ನಷ್ಟವಾದರೆ ಆ ಬ್ಯಾರೇಜ್‌ಗಳನ್ನು ತಕ್ಷಣ ರಿಪೇರಿ ಮಾಡುವ ದಿಕ್ಕಿನಲ್ಲೂ ಕೂಡ ಸರ್ಕಾರ ಗಮನವನ್ನು ಕೊಡುತ್ತದೆ ಎನ್ನುವ ಮಾತನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ರಿಪೇರಿ ಮಾಡಿ ಬೇಕಾದ ನೀರನ್ನು ಅದಕ್ಕೆ ಮತ್ತೆ ಬಿಡಬೇಕಾಗುತ್ತದೆ. ಅಲ್ಲಿ ಬ್ಯಾರೇಜು ಹೋಯಿತೆಂದರೆ ನೀರು ನಿಲ್ಲುವುದೇ ಇಲ್ಲ. ನೀವು ಬ್ಯಾರೇಜು ರಿಪೇರಿ ಆದ ಮೇಲೆ ನೀರು ಕುಡಿಯಲಿಕ್ಕೆ ಮತ್ತೆ ಬಿಡಬೇಕು. ದಯವಿಟ್ಟು ಆ ಕುಡಿಯುವ ನೀರು ಬಿಡುತ್ತೇವೆ ಎನ್ನುವುದೂ ಆಗಬೇಕು. ಮತ್ತೆ ಇದು ಕ್ವಿಕ್ ಆಗಿ ಆಗಬೇಕು. ಮೂರು–ನಾಲ್ಕು ದಿವಸದಲ್ಲಿ ಅಲ್ಲಿ ನೀರು ನಿಲ್ಲುವ ಹಾಗೆ ವ್ಯವಸ್ಥೆಯಾಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ರೈತರ ಸಮಸ್ಯೆಯನ್ನೂ ಪರಿಹಾರ ಮಾಡುತ್ತೇವೆ. ಕುಡಿಯುವ ನೀರಿಗೂ ಕೂಡ ತೊಂದರೆಯಾಗದಂತೆ ನೋಡಿ ಕೊಳ್ಳುತ್ತೇವೆ.